10) ಅಧಿಕಾರಿಗಳು ತಾವು ಮೊದಲು ಕಾರ್ಯ ನಿರ್ವಹಿಸಿದ ಸ್ಥಳಗಳಲ್ಲಿ ಪ್ರಕರಣಗಳನ್ನು ತನಿಖೆ ಮಾಡಿದ್ದು ಆ ಪ್ರಕರಣಗಳ ಸಾಕ್ಷಿಗಾಗಿ ಕೋರ್ಟಿಗೆ ಹೋಗಿಬರುವುದು.

ಅಂಗವಿಕಲರ ಬಗ್ಗೆ

821- ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟಿ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗವಿಕಲರ ಗಣತಿಯನ್ನು ಮಾಡಲಾಗಿದೆಯೇ

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗಿದೆ ಹಾಗೂ ಅವರುಗಳ ಸಂಖ್ಯೆ ಎಷ್ಟು?

ಇ) ಅಂಗವಿಕಲರುಗಳಿಗಾಗಿ ಕೊಡುತ್ತಿರುವ ಪರಿಹಾರಧನ ಎಷ್ಟು ಹಾಗೂ ಇತರೆ ಸೌಲಭ್ಯಗಳೇನು?

ಈ) ಇವುಗಳ ವಿತರಣೆ ಸರಿಯಾಗಿ ಆಗುತ್ತಿದೆಯೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು)

ಅ) ಇಲ್ಲ. ಆದರೆ ಈ ಸಾಲಿನಲ್ಲಿ ನಾಲ್ಕು ಆಯ್ದ ಜಿಲ್ಲೆಗಳಲ್ಲಿ ಅಂದರೆ ಚಿತ್ರದುರ್ಗ, ಗುಲ್ಬರ್ಗ, ಧಾರವಾಡ ಮತ್ತು ಮಂಗಳೂರು ಈ ಜಿಲ್ಲೆಗಳಲ್ಲಿ ಬಾಲವಿಕಾಸ ಯೋಜನೆ ಇರುವಲ್ಲಿ ಸಮೀಕ್ಷೆಯನ್ನು ಈ ವರ್ಷದಲ್ಲಿ ಕೈಗೊಳ್ಳಲಾಗುತ್ತಿದೆ.

ಆ) ಗಣತಿ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲವಾದ ಸಂಖ್ಯೆ ಎಷ್ಟೊಂದು ಲಭ್ಯವಿಲ್ಲ.

ಇ) ಯಾವುದೇ ಪರಿಹಾರ ಧನ ನೀಡುವ ಯೋಜನೆಗಳಿರುವುದಿಲ್ಲ ಆದರೆ ಇತರೇ ಸೌಲಭ್ಯಗಳ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಹೌದು.

ಅನುಬಂಧ

1. ಶೈಕ್ಷಣಿಕ ಕಾರ್ಯಕ್ರಮಗಳು

ಅ) ಅಂಧ ಮಕ್ಕಳ ವಸತಿ ಶಾಲೆಗಳು

ಆ) ಬ್ರೈಲ್ ಮುದ್ರಣಾಲಯ

ಇ) ರೆಸಿಡೆನ್ಸಿಯಲ್ ಸ್ಕೂಲ್ ಫಾರ್ ದಿ ಡೆಫ್ ಚಿಲ್ಡ್ರನ್ಸ್

ಈ) ಅಂಗವಿಕಲರಿಗಾಗಿ ಮೆಟ್ರಿಕ್ ನಂತರದ ಶಿಕ್ಷಣ

ಉ) ಸಮನ್ವಯ ಶಿಕ್ಷಣ

ಊ) ವಿದ್ಯಾರ್ಥಿ ವೇತನ

2. ಉದ್ಯೋಗ ಮತ್ತು ತರಬೇತಿ

ಅ) ಉದ್ಯೋಗದಲ್ಲಿ ಮೀಸಲಾತಿ.

ಆ) ವಿಶೇಷ ಉದ್ಯೋಗ ವಿನಿಮಯ ಕೇಂದ್ರ

ಇ) ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ನೆರವು

3. ಅಂಗವಿಕಲರ ಪುನರ್ವಸತಿ ಕಾರ್ಯಕ್ರಮಗಳು

ಅ) ಜಿಲ್ಲಾ ಪುನರ್ವಸತಿ ಕೇಂದ್ರ, ಮೈಸೂರು

ಆ) ದೈಹಿಕ ಅಂಗವಿಕಲರಿಗೆ ಕೃತಕ ಅಂಗಾಂಗಳು

ಇ) ಸಾರಿಗೆ ಭತ್ಯೆ

ಈ) ಶೇ 50 ರಷ್ಟು ಇಂಧನ ರಿಯಾಯ್ತಿ

ಉ) ವೃದ್ಧಾಶ್ರಮಗಳು

ಊ) ಬುದ್ಧಿ ಮಾಂದ್ಯರ ಸಂಸ್ಥೆಗಳು.

ರಾಜ್ಯದಲ್ಲಿ ದರೋಡೆಗಳು ಹೆಚ್ಚುತ್ತಿರುವುದು

822 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 2 ತಿಂಗಳಲ್ಲಿ ದರೋಡೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇವುಗಳಿಗೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ)ಕಳೆದ ಎರಡು ತಿಂಗಳಲ್ಲಿ ವರದಿಯಾದ ದರೋಡೆಗಳು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರುತ್ತಿಲ್ಲ.

ಆ) ಉದ್ಭವಿಸುವುದಿಲ್ಲ. ಆದರೆ ದರೋಡೆಗಳನ್ನು ತಪ್ಪಿಸಲು ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ:

ಎಲ್ಲಾ ಜಿಲ್ಲೆ ಮತ್ತು ನಗರಗಳಲ್ಲಿ ದರೋಡೆ ನಿರೋಧಿ ದಳಗಳನ್ನು ರಚಿಸಲಾಗಿದೆ. ಮತ್ತು ದರೋಡೆ ಹೆಚ್ಚಾಗಿ ವರದಿಯಾಗಿರುವ ಸ್ಥಳಗಳು ಮತ್ತು ನಗರ, ಪಟ್ಟಣ, ಹಳ್ಳಿಗಳ ಹೊಲವಲಯದಲ್ಲಿ ರಾತ್ರಿ ಗಸ್ತನ್ನು ಬಲಪಡಿಸಲು ಒತ್ತು ನೀಡಲಾಗಿದೆ. ಹೆದ್ದಾರಿಗಳಲ್ಲಿ ಮತ್ತು ರಸ್ತೆಗಳಲ್ಲಿ ಶಸ್ತ್ರಾಸ್ತ್ರ ಗಸ್ತನ್ನು ತೀವ್ರಗೊಳಿಸಲಾಗಿದೆ. ಕಗ್ಗತ್ತಲು ರಾತ್ರಿಗಳಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿರುವ ಅಪಚರಿತರನ್ನು ಹಿಡಿಯಲು ವಿಶೇಷ ನಾಕಾಬಂದಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪಕ್ಕದ ರಾಜ್ಯಗಳ ಪೋಲೀಸರ ಸಹಕಾರ ಪಡೆದು ಈ ಹಿಂದಿನ ಸಂದರ್ಭಗಳಲ್ಲಿ ದರೋಡೆ ನಡೆಸಿರುವ ಅಂತರ ರಾಜ್ಯ ಅಪರಾಧಿಗಳ ಮತ್ತು ಎಂ.ಓ.ಬಿ.ಅಪರಾಧಿಗಳ ಪಟ್ಟಿಯನ್ನು ತಯಾರಿಸಲು ಪ್ರಯತ್ನ ಮಾಡಲಾಗಿದೆ. ರಾಜ್ಯಮಟ್ಟದಲ್ಲಿ ಎರಡು ದರೋಡೆ ನಿರೋಧ ದಳಗಳನ್ನು, ಇಬ್ಬರು ಪೋಲೀಸ್ ಸೂಪರಿಂಟೆಂಡೆಂಟರ ಮೇಲ್ವಿಚಾರಣೆಯಲ್ಲಿ ಸಿ.ಐ.ಡಿ.ಯಲ್ಲಿ ಸ್ಥಾಪಿಸಲಾಗಿದೆ, ಸಿ.ಐ.ಡಿ.ಯ ದರೋಡೆ ನಿರೋಧ ದಳದ ಅಧಿಕಾರಿಗಳು ಬಹುತೇಕ ಎಲ್ಲಾ ವೃತ್ತಿ ನಿರತ ದರೋಡೆ ಘಟನಾ ಸ್ಥಳಗಳಿಗೆ ಭೇಟಿ ಕೊಡುತ್ತಿದ್ದಾರೆ ಮತ್ತು ಪಕ್ಕದ ರಾಜ್ಯ ಪೋಲೀಸರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ. ಗೃಹ ರಕ್ಷಕರನ್ನು ಸಹ ಪೋಲೀಸ್ ಸಿಬ್ಬಂದಿ ಹೆಚ್ಚಿಸಲು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ

823- ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

2) ಆ ಪೈಕಿ ಎಷ್ಟು ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಕಟ್ಟಡಗಳಿವೆ?

3) ಉಳಿದ ವಿದ್ಯಾರ್ಥಿನಿಲಯಗಳಿಗೆ ಯಾವಾಗ ಕಟ್ಟಡಗಳನ್ನು ಕಟ್ಟಲಾಗುವುದು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

1) ಪರಿಶಿಷ್ಟ ಜಾತಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು - 636